# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 290
ಸದಸ್ಯರ ಹೆಸರು : ಡಾ|| ವೈ.ಎ.ನಾರಾಯಣಸ್ವಾಮಿ
ಉತ್ತರಿಸುವ ಸಚಿವರು : ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು
ಉತ್ತರಿಸುವ ದಿನಾಂಕ : 06.12.2023

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ | ಕೋಲಾರ ಜಿಲ್ಲೆ, ಶ್ರೀನಿವಾಸಪುರ ಪಟ್ಟಣದಲ್ಲಿರುವ ಬಸ್ ನಿಲ್ದಾಣವು ತುಂಬಾ ಚಿಕ್ಕದಾಗಿದ್ದು, ಸದರಿ ಬಸ್ ನಿಲ್ದಾಣವನ್ನು ಹೊಸದಾಗಿ ವಿಶಾಲವಾಗಿ ನಿರ್ಮಿಸಲು ಸರ್ಕಾರ ಚಿಂತಿಸಿದೆಯೇ; | ಶ್ರೀನಿವಾಸಪುರ ಪಟ್ಟಣದಲ್ಲಿ ಅಗತ್ಯ ಮೂಲಭೂತ ಸೌಕರ್ಯಗಳೊಂದಿಗೆ ಕ.ರಾ.ರ.ಸಾ.ನಿಗಮದ ಎರಡು ಬಸ್ ನಿಲ್ದಾಣಗಳು ಕಾರ್ಯಾಚರಣೆಯಲ್ಲಿದ್ದು, ಪ್ರಸ್ತುತ ಇರುವ ಬಸ್ ನಿಲ್ದಾಣವನ್ನು ವಿಶಾಲವಾಗಿ ನಿರ್ಮಿಸುವ ಪ್ರಸ್ತಾವನೆ ಇರುವುದಿಲ್ಲ. |
| ಆ | ಹಾಗಿದ್ದಲ್ಲಿ, ಹೊಸ ಬಸ್ ನಿಲ್ದಾಣವನ್ನು ನಿರ್ಮಿಸಲು ಸ್ಥಳವನ್ನು ಗುರುತಿಸಲಾಗಿದೆಯೇ; ಹಾಗೂ ಯಾವ ಕಾಲ ಮಿತಿಯೊಳಗೆ ಈ ಹೊಸ ಬಸ್ ನಿಲ್ದಾಣವನ್ನು ನಿರ್ಮಿಸಲಾಗುವುದು; | |
| ಇ | ದೇವನಹಳ್ಳಿಯಿಂದ ಕೋಲಾರದವರೆಗೂ ವಯಾ ಹೆಚ್-ಕ್ರಾಸ್ ಹಾದು ಹೋಗುವ ರಸ್ತೆಯ ವಾಹನ ಗಣತಿ ಕುರಿತು ಫೆಬ್ರುವರಿ-2013ರಲ್ಲಿ ನಡೆಸಲಾದ ವಾಹನ ಗಣತಿ ಪ್ರಕಾರ, ಸದರಿ ರಸ್ತೆಯ ವಾಹನ ದಟ್ಟಣೆ ನಿಭಾಯಿಸಲು ಸಮರ್ಥವಿರುವುದಿಲ್ಲವೆಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ದೇವನಹಳ್ಳಿಯಿಂದ ಕೋಲಾರವರೆಗೂ ವಯಾ ಹೆಚ್-ಕ್ರಾಸ್ ಹಾದು ಹೋಗುವ ರಸ್ತೆಯು ಕೋಲಾರ ವಿಭಾಗದ ವ್ಯಾಪ್ತಿಯಲ್ಲಿ 28.89 ಕಿ.ಮೀ. ನಿಂದ 50.60 ಕಿ.ಮೀ.ವರೆಗೂ ಕೋಲಾರ ನಗರಕ್ಕೆ ಒಳಪಟ್ಟಿರುತ್ತದೆ. ಸದರಿ ರಸ್ತೆಯಲ್ಲಿ ವಾಹನ ಸಂಚಾರ ದಟ್ಟಣೆಯು ಹೆಚ್ಚಾಗಿದ್ದು, ದಟ್ಟಣೆಯನ್ನು ನಿಭಾಯಿಸಲು ಹಲವು ಸರಪಳಿಗಳಲ್ಲಿ ಕಾಮಗಾರಿಗಳನ್ನು ನಿರ್ವಹಿಸಿದ್ದು ಉಳಿಕೆ ಸರಪಳಿಗಳಲ್ಲಿ ನಿರ್ವಹಣಾ ಕಾಮಗಾರಿ ಅಡಿಯಲ್ಲಿ ಹಂತ ಹಂತವಾಗಿ ಡಾಂಬರು ತೇಪೆಗಳನ್ನು ಪೂರ್ಣಗೊಳಿಸಿ ವಾಹನ ಸಂಚಾರಕ್ಕೆ ಅನುವು ಮಾಡಿಕೊಡಲಾಗಿರುತ್ತದೆ. |
| ಈ | ಸದರಿ ರಸ್ತೆಯ ವಾಹನ ದಟ್ಟಣೆ ನಿಭಾಯಿಸಲು ಸಮರ್ಥವಿಲ್ಲದಿದ್ದರೂ ಇಲ್ಲಿಯವರೆವಿಗೂ ಈ ರಸ್ತೆಯನ್ನು ಮೇಲ್ದರ್ಜೆಗೇರಿಸದೇ ಇರುವುದಕ್ಕೆ ಕಾರಣಗಳೇನು; | ಪ್ರಸ್ತುತ ಕೇಂದ್ರ ಸರ್ಕಾರದ ಆರ್ಥಿಕ ಸಹಯೋಗದೊಂದಿಗೆ 4 ಪಥದ ರಸ್ತೆಯನ್ನಾಗಿ ಸದರಿ ರಸ್ತೆಯನ್ನು ಅಗಲೀಕರಣಗೊಳಿಸುವ ಪ್ರಸ್ತಾವನೆಯನ್ನು ಕೆ.ಆರ್.ಡಿ.ಸಿ.ಎಲ್. ವತಿಯಿಂದ ಯೋಜನೆ ರೂಪುಗೊಳ್ಳುತ್ತಿದ್ದು, ಯೋಜನಾ ವರದಿ ತಯಾರಿಕೆಯ ಹಂತದಲ್ಲಿರುತ್ತದೆ. |
| ಉ | ಯಾವ ಕಾಲಮಿತಿಯೊಳಗೆ ಸದರಿ ರಸ್ತೆಯನ್ನು ಮೇಲ್ದರ್ಜೆಗೇರಿಸಲು ಸರ್ಕಾರ ಕ್ರಮ ಕೈಗೊಳ್ಳುವುದು ? | |

ಸಂಖ್ಯೆ: ಟಿಡಿ 145 ಟಿಸಿಕ್ಯೂ 2023

(ರಾಮಲಿಂಗಾರೆಡ್ಡಿ)
ಸಾರಿಗೆ ಮತ್ತು ಮುಜರಾಯಿ ಸಚಿವರು